

# ಪರಿಸರ ಜಾಗೃತಿಯ ಕಿರುಚಿತ್ರೋತ್ಸವ

**ವಿಶ್ವ ಭೂ ದಿನ ಅಂಗವಾಗಿ ಸುಚಿತ್ರಾ ಫಿಲ್ಮ್ ಸೊಸೈಟಿಯೂ ಲ್ಯಾಂಡ್‌ಸ್ಕೇಪ್ ವಿಝಾರ್ಡ್ ಸಂಸ್ಥೆ ಜೊತೆಗೂಡಿ ಪರಿಸರ ಚಲನಚಿತ್ರೋತ್ಸವ ಆಯೋಜಿಸಿದೆ. ಚಿತ್ರೋತ್ಸವದ ಉದ್ದೇಶದ ಬಗೆಗಿನ ಕಿರುಮಾಹಿತಿ ಇಲ್ಲಿದೆ.**

ಭಾರತವೂ ಸೇರಿದಂತೆ ಜಗತ್ತಿನ ಹಲವು ದೇಶಗಳಲ್ಲಿ ಸಾಕಷ್ಟು ಚಿತ್ರೋತ್ಸವಗಳು (ಫಿಲ್ಮ್ ಫೆಸ್ಟಿವಲ್) ಪ್ರತಿ ವರ್ಷವೂ ನಡೆಯುತ್ತಲೇ ಇರುತ್ತವೆ. ಈಚೆಗಷ್ಟೇ ರಾಜ್ಯದಲ್ಲೂ 'ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ' ಜರುಗಿತ್ತು. ಆದರೆ, ಇದುವರೆಗೆ ಎಲ್ಲೂ ಯಾರೂ ಆಯೋಜಿಸದ ಪರಿಸರ ಚಲನಚಿತ್ರೋತ್ಸವಕ್ಕೆ ಬೆಂಗಳೂರು ಸಜ್ಜಾಗುತ್ತಿದೆ.

ಹೌದು, ಏಪ್ರಿಲ್ 22 'ವಿಶ್ವ ಭೂ ದಿನ'. ಅದರ ಅಂಗವಾಗಿ ಸುಚಿತ್ರಾ ಫಿಲ್ಮ್ ಸೊಸೈಟಿಯು ಲ್ಯಾಂಡ್‌ಸ್ಕೇಪ್ ವಿಝಾರ್ಡ್ ಸಂಸ್ಥೆಯ ಜೊತೆಗೂಡಿ ಏಪ್ರಿಲ್ 20 ಹಾಗೂ 21 ರಂದು ಸುಚಿತ್ರ ಪರಿಸರ ಚಲನಚಿತ್ರೋತ್ಸವ (ಸುಚಿತ್ರಾ ಎನ್ವಿರಾನ್‌ಮೆಂಟ್ ಫಿಲ್ಮ್ ಫೆಸ್ಟಿವಲ್) ಆಯೋಜಿಸಿದೆ. ಹೆಸರೇ ಹೇಳುವಂತೆ ಈ ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳುವ ಎಲ್ಲ ಸಿನಿಮಾಗಳು ಒಂದಲ್ಲ ಒಂದು ರೀತಿಯಲ್ಲಿ ಪರಿಸರಕ್ಕೆ ಸಂಬಂಧಪಟ್ಟಿವೆ. ಲ್ಯಾಂಡ್‌ಸ್ಕೇಪ್ ವಿಝಾರ್ಡ್ ಸಂಸ್ಥೆಯು ಈ ಹಿಂದೆ ಅಘನಾಶಿನಿ ನದಿಯ ಬಗ್ಗೆ ಸಾಕ್ಷ್ಯಚಿತ್ರ ನಿರ್ಮಿಸಿ ಗಮನ ಸೆಳೆದಿತ್ತು.

ನದಿ, ಭೂಮಿ, ಜೀವವೈವಿಧ್ಯತೆ, ಪರಿಸರಮಾಲಿನ್ಯ ಹೀಗೆ ಹಲವು ಪರಿಸರಕ್ಕೆ ಸಂಬಂಧಪಟ್ಟಂತಹ ಹಲವು ವಿಚಾರಗಳ ಸೂಕ್ಷ್ಮಾತಿಸೂಕ್ಷ್ಮ ವಿಚಾರದ ಎಳೆಗಳನ್ನು ಇಟ್ಟುಕೊಂಡು ಹೆಣೆದ ದೇಶ ವಿದೇಶದ ಸುಮಾರು 18 ಸಿನಿಮಾಗಳು ಈ ಸಿನಿಮೋತ್ಸವದಲ್ಲಿ ಪ್ರದರ್ಶನಗೊಳ್ಳಲಿವೆ. ಚರ್ಚಾ ಕಾರ್ಯಕ್ರಮಗಳೂ ಇವೆ. ಚಿತ್ರೋತ್ಸವದಲ್ಲಿ ಪಾಲ್ಗೊಳ್ಳಲು ಉಚಿತ ಪ್ರವೇಶ ಕಲ್ಪಿಸಿದ್ದು, ಆಸಕ್ತರು ಏಪ್ರಿಲ್ 18ರ ಒಳಗೆ ಆನ್‌ಲೈನ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು.



'ಎಲ್ಲ ಕಾಲಘಟ್ಟದ ಪರಿಧಿಗಳಲ್ಲಿ ಮನುಷ್ಯನ ವಿಕೃತಿಗಳಿಗೆ ಪ್ರಕೃತಿ ಸಾಕ್ಷಿ. ಅಭಿವೃದ್ಧಿ ಹೆಸರಿನ ಮನುಷ್ಯನ ದಾಳಿಗೆ ನಲುಗಿ ನಾಶವಾಗುತ್ತಿರುವುದೂ ಪ್ರಕೃತಿಯ ಸೊಬಗು. ಮನಷ್ಯನ ಉಳಿವಿಗೆ ಮೂಲವೇ ಪ್ರಕೃತಿ. ಆ ಪ್ರಕೃತಿಯನ್ನೇ ಮರೆತು ಅದನ್ನು ನಾಶ ಮಾಡುತ್ತಾ ಮನುಷ್ಯನ ಅಭಿವೃದ್ಧಿಯ ನಾಗಾಲೋಟ ರಭಸವಾಗಿ ಸಾಗುತ್ತಲೇ ಇದೆ. ಪರಿಸರ ಉಳಿವೇ ನಮ್ಮ ಅಸ್ತಿತ್ವ ಎಂಬುದನ್ನು ತಿಳಿಸುವುದಕ್ಕಾಗಿ ಈ ಚಿತ್ರೋತ್ಸವವನ್ನು ಆಯೋಜಿಸಿದ್ದೇವೆ' ಎನ್ನುತ್ತಾರೆ ಲ್ಯಾಂಡ್‌ಸ್ಕೇಪ್ ವಿಝಾರ್ಡ್ ಸಂಸ್ಥೆಯ ಸದಸ್ಯ ಹಾಗೂ ಸಾಕ್ಷ್ಯಚಿತ್ರ ನಿರ್ದೇಶಕ ಅಶ್ವಿನಿಕುಮಾರ್ ಭಟ್.

'ಇಡೀ ದೇಶದಲ್ಲಿ ಇಂದು ರಾಜಕೀಯದ ಚುನಾವಣಾ ನೃತ್ಯ ತಾಂಡವವಾಡುತ್ತಿದೆ. ಅಧಿಕಾರಕ್ಕೇರುವ ಒಂದೇ ಅಜೆಂಡಾದಿಂದ ಎಲ್ಲ ಪಕ್ಷಗಳು ತಮ್ಮದೇ ಶೈಲಿಯಲ್ಲಿ ಮತದಾರರಿಗೆ ವಿವಿಧ ರೀತಿಯ ಆಮಿಷವೊಡ್ಡಿ ಮತಯಾಚನೆ ಮಾಡುತ್ತಿದ್ದಾರೆ. ಪರಿಸರ ಹೊರತಾಗಿ ಬೇರೆಲ್ಲ ವಿಚಾರಗಳಿಗೆ ರಾಜಕೀಯ ಪಕ್ಷಗಳು ತಮ್ಮ ತಮ್ಮ ಪ್ರಣಾಳಿಕೆಗಳಲ್ಲಿ ಆದ್ಯತೆ ನೀಡಿದ್ದಾರೆ. ಆದರೆ, ಮನಷ್ಯನ ಅಸ್ತಿತ್ವ ನಿಂತಿರುವ ಪರಿಸರದ ಬಗ್ಗೆ ಯಾವೊಬ್ಬ ರಾಜಕಾರಣಿಯೂ ಮಾತನಾಡುತ್ತಿಲ್ಲ' ಎನ್ನುವುದು ಅವರ ಬೇಸರ.

'ಮನುಷ್ಯರ ವರ್ತನೆ ಈಗ ಹೇಗಿದೆ ಎಂದರೆ, ಮನೆಯ ಅಸ್ತಿತ್ವದ ಪ್ರಶ್ನೆ ಎದ್ದಿರುವಾಗ ಮನೆಗೆ ಬೇಕಿರುವ ಟೀವಿ ಸೇರಿದಂತೆ ಇನ್ನಿತರ ವಸ್ತುಗಳ ಬಗ್ಗೆ ಚಿಂತಿಸುವಂತಿದೆ. ಪ್ರಕೃತಿ ಮನುಷ್ಯನಿಗೆ ಮನೆಯಿದ್ದಂತೆ. ಪ್ರಕೃತಿಯೇ ಇಲ್ಲದ ಮೇಲೆ ಮನು ಸಂಕುಲಕ್ಕೆ ಇನ್ನೂ ಅಭಿವೃದ್ಧಿ ಏನಕ್ಕೆ ಬೇಕು. ಯಾವುದೇ ಟೀವಿ ವಾಹಿನಿಯನ್ನು ಹಾಕಿದರೂ ರಾಜಕೀಯದ ರಂಗಾಟವೇ ಕಾಣುತ್ತದೆ. ಪರಿಸರದ ಅನಿವಾರ್ಯತೆಯ ನೆಲೆಗಟ್ಟಿನಲ್ಲಿ ಅದನ್ನು ನೋಡಿದರೆ ಎಲ್ಲವೂ ಹಾಸ್ಯಾಸ್ಪದವಾಗಿ ಕಾಣುತ್ತದೆ. ಈ ಎಲ್ಲ ಕಾರಣಕ್ಕೆ ಪರಿಸರದ ಅನಿವಾರ್ಯತೆ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ನಮ್ಮದು. ವಿದೇಶಗಳಲ್ಲಿಯೂ ಪರಿಸರದ ಜಾಗೃತಿಗೆ ಏನೆಲ್ಲ ಪ್ರಯತ್ನಗಳು ಆಗುತ್ತವೆ ಎಂಬುದನ್ನು ನಮ್ಮ ಜನರಿಗೆ ತಿಳಿಸುವ ಸದುದ್ದೇಶವೂ ಇದೆ' ಎಂದು ಹೇಳುತ್ತಾರೆ.

'ಪರಿಸರ ವಿಚಾರವಾಗಿ ಸುಚಿತ್ರಾ ಫಿಲ್ಮ್ ಸೊಸೈಟಿ ಸದಸ್ಯರ ಜೊತೆ ಚರ್ಚಿಸುವಾಗ ಈ ಚಿತ್ರೋತ್ಸವ ಪ್ರಾರಂಭಿಸುವ ಆಲೋಚನೆ ತಲೆಗೆ ಬಂತು. ಇದು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತೋ ಗೊತ್ತಿಲ್ಲ. ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಚಿತ್ರೋತ್ಸವ ಆಯೋಜಿಸಿದ್ದೇವೆ. ನಾವಾದರೂ ಈ ಪ್ರಯತ್ನ ಮಾಡದಿದ್ದರೆ ಮುಂದೆ ಯಾರೂ ಮಾಡುವುದಿಲ್ಲ' ಎಂದರು.

ಸಂಪರ್ಕ: 08026711785/ 9945213771